

ದೇವರನ್ನು ನಂಬಿ ಬದುಕನ್ನು ಸಾಗಿಸುತ್ತಿದ್ದ ಮನೋಧರ್ಮದ ಜಾಗದಲ್ಲೀಗ, ಮಾಹಿತಿ ಕುರಿತಾದ ನಂಬಿಕೆ ಕಾಣಿಸಿಕೊಳ್ಳುತ್ತಿದೆ. ನಮ್ಮ ಬದುಕಿನ ಅವಶ್ಯಕತೆಗಳನ್ನು ಹಾಗೂ ರೀತಿರಿವಾಜುಗಳನ್ನು ‘ಮಾಹಿತಿ’ಯೇ ಪೂರೈಸುತ್ತಿದೆ. ಮುಂದಿನ ದಿನಗಳಲ್ಲಿ ನಮ್ಮ ಆಯ್ಕೆಗಳೆಲ್ಲವನ್ನೂ ‘ಡೇಟಾ ದೇವರ’ ಕೈಗೊಪ್ಪಿಸಬೇಕಾದ ಸಾಧ್ಯತೆಯೂ ಇದೆ. ಪ್ರತಿ ಕ್ಷಣವೂ ಅಪಾರ ಪ್ರಮಾಣದಲ್ಲಿ ಸೃಷ್ಟಿಗೊಳ್ಳುತ್ತ, ಪರಿಷ್ಕರಣೆಗೊಳಗಾಗುತ್ತಿರುವ ‘ಡೇಟಾ’ ಸರ್ವಾಂತರ್ಯಾಮಿ ರೂಪು ಪಡೆದುಕೊಂಡಿದೆ. ನಮ್ಮ ಬಗೆಗಿನ ಮಾಹಿತಿ ನಮಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಇನ್ನೆಲ್ಲೋ ಇದೆ ಎನ್ನುವ ಸಂದರ್ಭದಲ್ಲಿ ನಾವಿದ್ದೇವೆ. ಈ ಮಾಹಿತಿಕ್ರಾಂತಿ ಮನುಕುಲಕ್ಕೆ ಸಾಕಷ್ಟು ಅನುಕೂಲಗಳನ್ನು ಒದಗಿಸಿದೆ; ಅಪಾಯದ ಸಾಧ್ಯತೆಗಳನ್ನೂ ಕಾಣಿಸುತ್ತಿದೆ. ನಾವು ಸೃಷ್ಟಿಸಿದ ಮಾಹಿತಿ ನಮ್ಮನ್ನೇ ನಿಯಂತ್ರಿಸಬಹುದಾದ ಸಾಧ್ಯತೆ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡಬಹುದು. ಆ ಕಾರಣದಿಂದಲೇ ಮಾಹಿತಿಯನ್ನು ಸೃಷ್ಟಿಸುವುದರ ಜೊತೆಜೊತೆಗೆ ಅದನ್ನು ನಿಯಂತ್ರಿಸುವ ವ್ಯವಸ್ಥೆಯನ್ನೂ ರೂಪಿಸಿಕೊಳ್ಳಬೇಕಾಗಿದೆ. ‘ಡೇಟಾ’ ಮತ್ತು ‘ಅಲ್ಗೊರಿದಂ’ನ ವಿರಾಟ್ ಸ್ವರೂಪದ ಬಗೆಗಿನ ವಿಸ್ತೃತ ಲೇಖನ, ಈ ಸಂಚಿಕೆಯ ‘ಸುಧಾ’ ವಿಶೇಷ.

■ ಗುರುರಾಜ್ ಎಸ್. ದಾವಣಗೆರೆ